ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಅರಣ್ಯ ಇಲಾಖೆಯವರು ಕಳುಹಿಸಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಎಷ್ಟು ವರ್ಷದ ಹಿಂದೆ ಅವರು. ಕಳುಹಿಸಿಕೊಟ್ಟಿದ್ದಾರೆ. ಅದನ್ನು ನೀವು ಯಾವ ವರ್ಷದಲ್ಲಿ ಅಪ್ರೂವ್ ಮಾಡುತ್ತೀರಿ ?

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ. ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳುವುದನ್ನು ಕಲಿಯಿರಿ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದನ್ನೆಲ್ಲಾ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಹತ್ತಿರ ಏನು ಲಿಸ್ಟ್ ಬಂದಿದೆ-(ಕೋಲಾರ, ಉತ್ತರಕನ್ನಡ ಮತ್ತು ಧಾರವಾಡ ಎಂದು ೩-೪ ಜಿಲ್ಲೆಗಳ ಹೆಸರುಗಳನ್ನು ಹೇಳಿದರು) ಅದನ್ನು ವಾರದೊಳಗೆ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಕಳುಹಿಸಿಕೊಡುತ್ತಾರೆಯೆ ?

ಅಧ್ಯಕ್ಷರು.—ಆಯಿತು. ಒಂದು ವಾರದೊಳಗೆ ಮಾಡಿ ಕಳುಹಿಸಿಕೊಡಿ.

ಶ್ರೀ ಜೆ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಆದಷ್ಟು ಶೀಘ್ರವಾಗಿ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಕಳುಹಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಅಡ್ಯಂತಾಯರವರೇ ತಾವು ಈ ರೀತಿ ಮಾಡಿದರೆ ನಾನು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕಳುಹಿಸಿಕೊಡಿ. ಈಗ ಮಾನ್ಯ ಬೆಲ್ಲದ್‌ರವರೆ ತಮ್ಮ ಪ್ರಶ್ನೆಯನ್ನು ಕೇಳಿ ಇಲ್ಲಿಗೆ ಆ ವಿಚಾರ ಮುಕ್ತಾಯವಾಯಿತು. ಇನ್ನು ನೀವು ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಧಾರವಾಡದಲ್ಲಿರುವ ಕೆ. ಎಂ. ಎಫ್ ಅವರಿಂದ ವಾಯುಮಾಲಿನ್ಯ

೧೬೪೬. ಶ್ರೀ ಚಂದ್ರಕಾಂತ್ ಬೆಲ್ಲದ(ಧಾರವಾಡ ನಗರ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್‌ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಕೆ. ಎಂ. ಎಫ್. ನ ಹಾಲಿನ ಸಂಸ್ಕರಣಾ ಕೇಂದ್ರದ ಸುತ್ತಲಿನ ಪ್ರದೇಶದಲ್ಲಿ ವಾಯು ಮಾಲಿನ್ಯದಿಂದ ದುರ್ವಾಸನೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ, ಹಾಗಿದ್ದಲ್ಲಿ, ಮಾಲಿನ್ಯ ತಡೆಗಟ್ಟಲು ಸರ್ಕಾರದವರಿಂದ ಕೈಗೊಂಡ ಕ್ರಮಗಳೇನು ?

ಆ) ಧಾರವಾಡದ ಕೆ. ಎಂ. ಎಫ್. ಹಾಲಿನ ಸಂಸ್ಕರಣ ಕೇಂದ್ರ ಪ್ರಾರಂಭವಾದ ವರ್ಷದಿಂದ ಈವರೆಗಿನ ಅದರ ಉತ್ಪಾದನೆಯ ಪ್ರತ್ಯೇಕವಾದ ವಿವರಣೆ ಕೊಡುವುದು. ಅದರ ಗರಿಷ್ಠ ಮಟ್ಟದ ಉತ್ಪಾದನೆಯ ಪ್ರಮಾಣವೆಷ್ಟು ಹಾಗೂ ಅದರ ಉತ್ಪಾದನೆ ಹೆಚ್ಚಿಸಲು ಯಾವ ಕ್ರಮ ತೆಗೆದು ಕೊಳ್ಳಲಾಗುವುದು ;

ಇ) ಈ ಘಟಕಕ್ಕೆ ಪ್ರತಿವರ್ಷದಲ್ಲಿ ಪೂರೈಕೆಯಾಗುತ್ತಿರುವ ಹಾಲಿನ ಪ್ರಮಾಣದ ಜಿಲ್ಲಾವಾರು ಪ್ರತ್ಯೇಕ ವಿವರ ಕೊಡುವುದು ;

ಈ) ಧಾರವಾಡ ಜಿಲ್ಲೆಯಲ್ಲಿಪ್ರತಿ ವರ್ಷ ಪ್ರಾರಂಭಿಸಿದ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು :

ಉ) ಹಾಲಿನ ಸರಬರಾಜು ಮಾಡಲು ಆಗಂತ್ತಿರುವ ವೆಚ್ಚ ಪ್ರತಿ ವರ್ಷದ್ದು ಎಷ್ಟು ; ಈ ಸರಬರಾಜು ವೆಚ್ಚ ತಗ್ಗಿಸಲು ಯಾವ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್,(ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಮೂಲಿನ್ಯ ಜಲ ಹೊರ ಹರಿತ ಸ್ಥಾವರದ ಸ್ಥಾಪನೆ ಮಾಡಲಾಗಿದ್ದು ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ದುರ್ವಾಸನೆ ಬರುವ ಸಾಧ್ಯತೆ ಉಂಟು ಅಂತಹ ಪ್ರಸಂಗಗಳಲ್ಲಿ ತಡೆಗಟ್ಟಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ)

ಉತ್ಪಾದನೆ (ಮೆಟ್ರಿಕ್ ಟನ್‌ಗಳಲ್ಲಿ)	೮೪-೮೫	೮೫-೮೬	೮೬-೮೭	೮೭-೮೮(ಮಾರ್ಚ್‌೮೮ರವರೆಗೆ)
ಕೆನೆ ರಹಿತ ಹಾಲಿನ ಪುಡಿ	೩೧೭.೫೯	೯೩೧.೧೬	೧೪೧೬.೨೪	೯೧೬.೯೮
ಸಂಪೂರ್ಣ ಹಾಲಿನ ಪುಡಿ	೨೦೧.೨೪	೨೯೯.೧೦	೩೪೪.೦೫	೫೬೪.೮೨
ಬೆಣ್ಣೆ	೩೫೪.೦೩	೬೬೩.೬೯	೧೧೦೮.೨೭	೭೪೯.೦೬
ತುಪ್ಪ	೧೨೭.೭೦	೫೭೩.೪೬	೬೦೮.೧೩	೧೪೦,೫೫

ಈ ಡೈರಿಯ ಸಾಮರ್ಥ್ಯ ದಿನಂ ಪ್ರತಿ ೧,೨೦ ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸಂವುದಾಗಿದೆ. ಇದನ್ನು ದಿನಂ ಪ್ರತಿ ೨ ಲಕ್ಷ ಲೀಟರಿಗೆ ಏರಿಸುವ ಯೋಜನೆಯಿದೆ.

ಇ)

ಜಿಲ್ಲಾವಾರು ಪೂರೈಕೆಯಾದ ಹಾಲಿನ ಪ್ರಮಾಣ	ಲಕ್ಷ ಕೆ. ಜಿ. ಗಳಲ್ಲಿ			
	೮೪-೮೫	೮೫-೮೬	೮೬-೮೭	೮೭-೮೮(ಮಾರ್ಚ್ ೮೮ರವರೆಗೆ
ಮೈಸೂರು	೩.೦೫	೧೯.೯೮	೮.೨೨	೧೨.೩೪
ಬೆಳಗಾಂ	೧.೨೩	೩೧.೮೨	೫೯.೪೬	೩೨.೭೪
ಶಿವಮೊಗ್ಗ	೦.೦೯	೦.೮೪	೮.೩೮	೩೧.೮೮
ತುಮಕೂರು	೨೫.೫೦	೨೯,೧೪	೩೪.೯೧	೫೫,೨೫
ಹಾಸನ	೯.೫೬	೩೪.೮೧	೩೦.೭೮	೨೮.೬೮
ಮಂಡ್ಯ	೧೨.೬೦	೨೭.೫೪	೨೬.೩೫	೧೩.೮೦
ಬೆಂಗಳೂರು	೦.೬೪	೧೫.೯೦	೩.೬೬	೧೯.೪೪
ಗುಲ್ಬರ್ಗ	೦.೧೦	೦.೧೨	೧.೧೭	೦.೨೧
ಧಾರವಾಡ	೦.೩೮	೨೮.೨೭	೧೮೫.೮೩	೮೩.೧೪
ಚಿತ್ರದುರ್ಗ	—	—	೪.೬೬	—
ಬಳ್ಳಾರಿ	—	—	೧೬.೯೬	೩.೦೩
ಬಿಜಾಪುರ	—	—	೧೩.೨೦	೫.೨೯

ಈ)

	೮೪–೮೫	೮೫–೮೬	೮೬–೮೭	೮೭–೮೮(ಮಾರ್ಚ್ ೩೧ರವರೆಗೆ
ಪ್ರಾರಂಭಿಸಿದ ಹಾಲು ಉತ್ಪಾದಕರ ಸಂಘಗಳು	೭೧	೫೩	೨೯	೨೩

ಉ) ಹಾಲಿನ ಸರಬರಾಜಿಗಾಗಿ ಆಗುತ್ತಿರುವ ಪ್ರತಿ ಪರ್ಷಗಳ ವೆಚ್ಚ.

ಲಕ್ಷ ರೂಪಾಯಿಗಳು

	೮೪–೮೫	೮೫–೮೬	೮೬–೮೭	೮೭–೮೮(ಮಾರ್ಚ್ ೧೯೮೮ರವರೆಗೆ
ಶೇಖರಣೆಗಾಗಿ ವೆಚ್ಚ	೧೬.೮೪	೩೨.೨೨	೩೮.೮೦	೨೧.೯೯
ವಿತರಣೆಗಾಗಿ ವೆಚ್ಚ	೩.೫೧	೬.೧೯	೭.೩೮	೫.೪೮

ಹೊಸ ಸಂಘಗಳ ಸ್ಥಾಪನೆ ಕ್ಷೀರ ಮಾರ್ಗಗಳ ಮೂರು ಹೊಂದಾಣಿಕೆ, ಸಾಗಾಣಿಕೆದಾರರೊಂದಿಗೆ ಸಂಧಾನ, ಹಾಲಿನ ಮೂಲಾಟದಲ್ಲಿ ಹೆಚ್ಚಳ ಮಾಡುವುದು, ಮುಂತಾದ ಕ್ರಮಗಳಿಂದ ಖರ್ಚನ್ನು ಕಡಿಮೆ ಮಾಡಲು ಕ್ರಮ ಜರುಗಿಸಲಾಗುವುದು.

ಶ್ರೀ ಚಂದ್ರಕಾಂತ ಜ. ಬಿಲ್ಲದ್ —ಅಧ್ಯಕ್ಷರೆ, ನಾನು ಕೇಳಿರುವುದು ಮೊದಲನೆಯ ಪ್ರಶ್ನೆ ''ಧಾರವಾಡ ಕೆ. ಎಂ. ಎಫ್. ನ ಹಾಲಿನ ಸಂಸ್ಕರಣಾ ಕೇಂದ್ರದ ಸುತ್ತಲಿನ ಪ್ರದೇಶದಲ್ಲಿ ವಾಯು ಮಾಲಿನ್ಯದಿಂದ ದುರ್ವಾಸನೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?'' ಎಂದು. ಇದಕ್ಕೆ ಸರಿಯಾದ ಉತ್ತರ ಕೊಡಲಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ಎಂದರೆ ಅದರ ಬಗ್ಗೆಯೂ ಸರಿಯಾದ ಉತ್ತರ ಕೊಡಲಿಲ್ಲ. ಉತ್ಪಾದನೆಯ ಮಟ್ಟವನ್ನು ಹೆಚ್ಚು ಮಾಡಬೇಕೆಂಬುದು ನಮ್ಮ ಮುಖ್ಯವಾದ ಉದ್ದೇಶ. ಕೆ.ಎಂ.ಎಫ್. ಆದಮೇಲೆ ಉತ್ಪಾದನೆ ಪೂರ್ಣವಾಗಿ ಆಗಬೇಕು ಎಂಬುದು ಉದ್ದೇಶ. ಧಾರವಾಡ ಬಿಜಾಪುರ ಮತ್ತು ಕಾರವಾರ ಸುತ್ತಮುತ್ತಲ ಜಿಲ್ಲೆಯಲ್ಲಿ ಸಾಕಷ್ಟು ಹಾಲು ಉತ್ಪಾದನೆ ಮಾಡಿ ಅಲ್ಲೇ ಸಂಗ್ರಹಣೆ ಮಾಡಬೇಕೆಂಬುದು ನಮ್ಮ ಉದ್ದೇಶ. ಶೇಖರಣಾ ವೆಚ್ಚ ಪ್ರತಿವರ್ಷ ಹೆಚ್ಚಾಗುತ್ತಿತ್ತು. ಆದರೆ ಹೋದಸಾರಿ ೩೮.೮೦ ಲಕ್ಷ ರೂಪಾಯಿ ಇದ್ದದ್ದು ಈ ಸಾರಿ ೨೯.೯೯ ಲಕ್ಷಕ್ಕೆ ಆಗಿದೆ, ಸಂತೋಷ. ಅದರಂತೆ ಸಾಗಾಣಿಕೆ ವೆಚ್ಚವೂ ಕಡಿಮೆ ಯಾಗಬೇಕು. ಧಾರವಾಡ ಜಿಲ್ಲೆ, ಬಿಜಾಪುರ ಜಿಲ್ಲೆ ಮತ್ತು ಕಾರವಾರ ಜಿಲ್ಲೆಯಲ್ಲಿ ಹಾಲು ಉತ್ಪಾದನೆಗೆ ಹೆಚ್ಚು ಅವಕಾಶ ಇರುವುದರಿಂದ ಅಲ್ಲಿ ಹಾಲು ಉತ್ಪಾದಕರ ಸಂಘ ಹೆಚ್ಚು ಕೆಲಸ ಮಾಡಬೇಕು. ಗರಿಷ್ಠ ಮಟ್ಟದ ಉತ್ಪಾದನೆಯನ್ನು ಕೆ.ಎಂ.ಎಫ್ ತೆಗೆಯಬೇಕು. ಆದರೆ ಅಲ್ಲಿ ಸುತ್ತ ಮುತ್ತ ಜನರಿಗೆ ಮಾಲಿನ್ಯದಿಂದ ಮತ್ತು ದುರ್ವಾಸನೆಯಿಂದ ಬಹಳ ಕಷ್ಟವಾಗಿ ಜನರು ಮನೆ ಬಿಡುತ್ತಿದ್ದಾರೆ ಅಲ್ಲಿ ಓಡಾಡುವ ಜನರಿಗೆ ವಾಸನೆಯ ಅನುಭವ ಇದೆ. ಇದರಿಂದ ವಾತಾವರಣ ಕಲುಷಿತವಾಗುತ್ತಿದೆ. ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್ —ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ತಕ್ಷಣ ಸ್ಥಳದ ಪರಿಶೀಲನೆ ಮಾಡಿ ಎಂದು ಹೇಳುತ್ತೇವೆ. ಮಾಲಿನ್ಯ ಕೇವಲ ದುರ್ವಾಸನೆಯಿಂದ ಆಗುವುದಿಲ್ಲ. ಅದರಿಂದೇನಾದರೂ ಅಪಾಯಕಾರಿ ಆಗುವುದಿದ್ದರೆ, ಸುತ್ತಮುತ್ತ ಇರತಕ್ಕ ಜೀವಿಗಳಿಗೆ ಹಾನಿಯಾದರೆ ನಿವಾರಣೆ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ ಜ. ಬಿಲ್ಲದ್ —ದುರ್ವಾಸನೆಯಿಂದ ಜನ ಮನೆ ಬಿಡುತ್ತಿದ್ದಾರೆ. ಅಲ್ಲಿ ಆಡ್ಡಾಡುವುದಕ್ಕೆ ಆಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ನಾನು ಸರಿಯಾದ ಉತ್ತರವನ್ನೇ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಅದನ್ನು ಸರಿಯಾಗಿ ಗಮನಿಸಬೇಕು. ದುರ್ವಾಸನೆ ಯಾವಾಗಲೂ

ಇರುವುದಿಲ್ಲ. ಅನಿವಾರ್ಯ ಪ್ರಸಂಗದಲ್ಲಿ ಬರಬಹುದು. ಈ ಡೈರಿಯ ಸಾಮರ್ಥ್ಯ ಇರತಕ್ಕದ್ದು ಪ್ರತಿದಿನಕ್ಕೆ ೧.೨೦ ಲಕ್ಷ ಲೀಟರ್. ಆದರೆ ಸುಮಾರು ೨ ಲಕ್ಷ, ಅಥವಾ ೨.೨೦ ಲಕ್ಷ ಲೀಟರ್‌ನಷ್ಟು ಹಾಲು ಇತ್ತೀಚೆಗೆ ಜಾಸ್ತಿ ಬರುತ್ತಿದೆ. ಆದರೆ ಆಲ್ಲಿ ಮೊದಲು ಅಳವಡಿಸಿರತಕ್ಕ ಯಂತ್ರಗಳ ಕೆಪ್ಯಾಸಿಟಿ ೧.೨೦ ಲಕ್ಷ ಲೀಟರ್‌ಗಳಿಗೆ. ಹೆಚ್ಚು ಹಾಲು ಬಂದರೆ ಆ ಡೈರಿ ೨೪ ಗಂಟೆಯೂ ಕಾಲವೂ ಕೆಲಸ ಮಾಡುವುದಿಲ್ಲ. ಅದು ೮ ಗಂಟ ಮಾತ್ರ ಕೆಲಸಮಾಡುತ್ತದೆ. ಆದರೂ ಆಲ್ಲಿ ದುರ್ವಾಸನೆ ಬರುತ್ತಿದೆ ಯೆಂದು ಮಾನ್ಯ ಸದಸ್ಯರು ಏನು ಹೇಳಿತ್ತಿದ್ದಾರೆ ಅದನ್ನು ನಾನು ತಪಾಸಣೆ ಮಾಡಿಸುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್. —ಸ್ವಾಮಿ, ಆಲ್ಲಿ ಜನರು ವಾಸಮಾಡುವುದಕ್ಕೆ ಸಾಧ್ಯವಿಲ್ಲ. ಬಹಳ ದುರ್ವಾಸನೆ ಬರುತ್ತಿದೆ. ಆ ದುರ್ವಾಸನೆಯಂ ಅನುಭವವನ್ನು ಪಡೆದವರಿಗೇ ಅದರ ಕಷ್ಟ ಗೊತ್ತಾಗುವುದು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದನ್ನು ತಪಾಸಣೆ ಮಾಡಿಸುತ್ತೇನೆ.

ಉಳ್ಳಾಲ ಕ್ಷೇತ್ರದ ವಿದ್ಯುತ್ ಸರಬರಾಜು.

೧೩೧೩. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಳ್ಳಾಲ ಕ್ಷೇತ್ರದಲ್ಲಿ ಆಗಾಗ ವಿದ್ಯುತ್ ಸರಬರಾಜು ನಿಂತು ಹೋಗುವುದರಿಂದ ಗ್ರಾಹಕರಿಗಾಗುವ ತೊಂದರೆ ಸರ್ಕಾರದಪರ ಗಮನಕ್ಕೆ ಬಂದಿದೆಯೇ?

ಆ) ಉಳ್ಳಾಲದ ಕೊನಜಿಯಲ್ಲಿ ಸಬ್-ಸ್ಟೇಷನ್ ಅನ್ನು ಯಾವಾಗ ಸ್ಥಾಪಿಸಲಾಯಿತು.

ಇ) ಸದರಿ ಸ್ಟೇಷನ್ನಿನಲ್ಲಿ ಯಾವ ಸಿಬ್ಬಂದಿಯನ್ನು ನೇಮಕ ಮಾಡದೆ ಇರುವುದರಿಂದ ವಿದ್ಯುತ್ ಆಗಾಗ ನಿಂತು ಹೋಗಲು ಕಾರಣವೆಂಬುದು ಸರ್ಕಾರದ ಗಮನಕ್ಕೆ ಬಿಳಿದಿದೆಯೇ?

ಈ) ಹಾಗಿದ್ದಲ್ಲಿ ಗ್ರಾಹಕ ತೊಂದರೆಯನ್ನು ನಿವಾರಿಸಲು ಈ ಸಬ್‌ಸ್ಟೇಷನ್ನಿಗೆ ಸಿಬ್ಬಂದಿಯನ್ನು ನೇಮಕ ಮಾಡಲು ಸರ್ಕಾರದಪರು ಕೈಗೊಂಡ ಕ್ರಮಗಳೇನು?

ಶ್ರೀ ಲಕ್ಷ್ಮೀನರಸಿಂಹಯ್ಯ, (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳ ಕ್ಷೇತ್ರದ ಕೆಲವು ಭಾಗಗಳಿಗೆ ಕೊನಜ ಸ್ಟೇಷನ್ನಿನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಇಲ್ಲಿಂದ ಹೊರಹೋಗುವ ಫೀಡರ್ ಟ್ರಿಪ್ ಆದರೆ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯುಂಟಾಗುತ್ತದೆ.

ಆ) ಕೊನಜಿಯಲ್ಲಿನ ಸ್ಟೇಷನ್ ದಿನಾಂಕ ೩೧-೩-೧೯೮೪ರಲ್ಲಿ ರಂದು ಕಾರ್ಯಾರಂಭ ಮಾಡಿತು.

ಇ) ಸದರಿ ಸ್ಟೇಷನ್ನಿನಲ್ಲಿ ಒಂದು ೧೧೦/೧೧ ಕೆವಿ ಸಿ ಎಂವಿಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರು ವಿಶಾತ್ರವಿದೆ ಆದ್ದರಿಂದ ಇದು ಸಿಬ್ಬಂದಿ ರಹಿತ ಸ್ಟೇಷನ್ನಾಗಿದೆ. ವಿದ್ಯುತ್ ನಿಲುಗಡೆ ಫೀಡರುಗಳು ದೋಷದಿಂದ ಟ್ರಿಪ್ ಆಗುವುದರಿಂದ ಉಂಟಾಗುತ್ತದೆ. ಇದಕ್ಕೂ ಸಿಬ್ಬಂದಿಗಳಿಗೂ ಸಂಬಂಧವಿಲ್ಲ. ಇವು ಅನಿರೀಕ್ಷಿತವಾದವುಗಳು.

ಈ) ಈ ಸ್ಟೇಷನ್ನಿಂದ ಹೊರಹೋಗುವ ಫೀಡರುಗಳು ಟ್ರಿಪ್ ಆದರೆ ಮಂಗಳೂರಿನಿಂದ ಸಿಬ್ಬಂದಿ ಬಂದು ಚೆಕ್ ಮಾಡಬೇಕು. ಇದರಿಂದ ಸ್ವಲ್ಪ ವಿಳಂಬ ಉಂಟಾಗುತ್ತದೆ. ಈ ಸ್ಟೇಷನ್ನಿನಲ್ಲಿ ಇನ್ನೊಂದು ೧೧೦/೧೧ ಕವಿ ಸಿ ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರು ಹಾಕುವ ಯೋಜನೆಯಿದ್ದು ಅದನ್ನು ಈ ಸಾಲಿನಲ್ಲಿ ಮಾಡಲು ಕಾರ್ಯಕ್ರಮವಿದೆ ಇದಕ್ಕೆ ಈ ಸಾಲಿನ ಆಯವ್ಯಯದಲ್ಲಿ ಮಂಡಳಿ ಹಣ ಒದಗಿಸಿದೆ. ಈ ಹೆಚ್ಚುವರಿ ಟ್ರಾನ್ಸ್‌ಫಾರ್ಮರು ಕಾರ್ಯನಿರತವಾದ ಮೇಲೆ ಇಲ್ಲಿಗೆ ಸಿಬ್ಬಂದಿ ನೇಮಕ ಮಾಡುವ ಯೋಜನೆಯಿದೆ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ (ಈ) ಪ್ರಶ್ನೆಗೆ ಉತ್ತರ ವಾಗಿ,

"ಈ ಸ್ಟೇಷನ್‌ನಿಂದ ಹೊರಹೋಗುವ ಫೀಡರುಗಳು ಟ್ರಿಪ್ ಆದರೆ ಮಂಗಳೂರಿನಿಂದ ಸಿಬ್ಬಂದಿ ಬಂದು ಚಾರ್ಜ್ ಮಾಡಬೇಕು. ಇದರಿಂದ ಸ್ವಲ್ಪ ವಿಳಂಬ ಉಂಟಾಗುತ್ತದೆ."